# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ.ಬೆಂಗಳೂರು

*********************************************************************

ಸಂಖ್ಯೆ :ಇ2/ಎಸ್.ಎಸ್.ಎಲ್.ಸಿ.ಮೌ.ಪ್ರ.ದಿ.ಸಂ.ಆನ್ಲೈನ್.ಪಾ.1/2021-21 ದಿನಾಂಕ:21/04/2021

## ಸುತ್ತೋಲೆ

ವಿಷಯ :- ಜೂನ್ / ಜುಲೈ 2021 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ ಶಿಕ್ಷಕರ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ನೋಂದಣಿ ಮಾಡುವಾಗ ಬ್ಯಾಂಕ್ ಖಾತೆಯ ವಿವರಗಳನ್ನು ಸರಿಯಾಗಿ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ :- ಮಂಡಳಿ ಸುತ್ತೋಲೆ ಸಂಖ್ಯೆ : ಸಿಎಸ್1/ ಗಣಕ ಶಾಖೆ /ಎಸ್.ಎಸ್.ಎಲ್.ಸಿ .ಮೌ. ನೋ.ಅಪ್ 01/2021-22 ದಿನಾಂಕ:17/04/2021.

******

ಜೂನ್/ಜುಲೈ 2021 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ನೋಂದಣಿ ಮಾಡಲು ಈಗಾಗಲೇ ಉಲ್ಲೇಖದಂತೆ ತಿಳಿಸಲಾಗಿರುತ್ತದೆ. ಮೌಲ್ಯಮಾಪಕರ ಮಾಹಿತಿಯನ್ನು ತಂತ್ರಾಂಶದಲ್ಲಿ ನೋಂದಾಯಿಸುವಾಗ ಬ್ಯಾಂಕ್ ಖಾತೆಯ ವಿವರಗಳನ್ನು (ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐ.ಎಫ್.ಎಸ್.ಸಿ.ಕೋಡ್) ಸರಿಯಾಗಿ ಪರಿಶೀಲಿಸಿ ಭರ್ತಿ ಮಾಡುವುದು .

ಜೂನ್/ಜುಲೈ 2021 ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಮೌಲ್ಯ ಮಾಪನ ಕಾರ್ಯದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಸಂಭಾವನೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯ ಮೊತ್ತವನ್ನು, ಮುಖ್ಯಶಿಕ್ಷಕರು ಮೌಲ್ಯಮಾಪಕರ ಮಾಹಿತಿಯನ್ನು ತಂತ್ರಾಂಶದಲ್ಲಿ ನೋಂದಾಯಿಸುವಾಗ ಭರ್ತಿ ಮಾಡಿರುವ ಬ್ಯಾಂಕ್ ಖಾತೆ ಸಂಖ್ಯೆಗೆ ನೆಫ್ಟ್ ಮೂಲಕ ವರ್ಗಾವಣೆ ಮಾಡಲಾಗುವುದು.

ಕಳೆದ ಎರಡು ಸಾಲುಗಳಿಂದ ಮೌಲ್ಯಮಾಪಕರ ಸಂಭಾವನೆ ಮೊತ್ತವನ್ನು ನೆಫ್ಟ್ ಮೂಲಕವೇ ಪಾವತಿ ಮಾಡಲಾಗುತ್ತಿದ್ದು, ಕೆಲವು ಮೌಲ್ಯಮಾಪಕರು ತಪ್ಪಾಗಿ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐ.ಎಫ್.ಎಸ್.ಸಿ ಕೋಡ್ ಅನ್ನು ದಾಖಲಿಸಿರುವುದರಿಂದ ಮೌಲ್ಯ ಮಾಪನ ಮುಗಿದ ತಿಂಗಳಾದರೂ ಅವರ ಮೌಲ್ಯಮಾಪನದ ಸಂಭಾವನೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯ ಮೊತ್ತ ಪಾವತಿ ಆಗಿರುವುದಿಲ್ಲ. ಇದರಿಂದ ಮೌಲ್ಯಮಾಪಕರಿಗೂ ತೊಂದರೆಯಾಗುವ ಜೊತೆಗೆ, ಮಂಡಳಿಯ ಕಾರ್ಯ ನಿರ್ವಹಣೆಯಲ್ಲಿಯೂ ಅಡಚಣೆ ಉಂಟಾಗಿರುತ್ತದೆ.

ಆದ್ದರಿಂದ ಶಿಕ್ಷಕರ ಬ್ಯಾಂಕ್ ಖಾತೆ ಸಂಖ್ಯೆಯನ್ನು ಪರಿಶೀಲಿಸಿ ಸರಿಯಾಗಿ ಭರ್ತಿ ಮಾಡುವುದು. ಒಂದು ವೇಳೆ ಅಸಮರ್ಪಕವಾಗಿ / ತಪ್ಪಾಗಿ ಬ್ಯಾಂಕ್ ಖಾತೆ ಸಂಖ್ಯೆಯನ್ನು ಭರ್ತಿಮಾಡಿ, ಶಿಕ್ಷಕರ ಖಾತೆಗೆ ಹಣ ವರ್ಗಾವಣೆ ಮಾಡುವಾಗ ಲೋಪಗಳುಂಟಾಗಿ ಸಂಬಂಧಪಟ್ಟವರ ಖಾತೆಗೆ ಹಣ ಜಮಾ ಆಗದೆ ಇದ್ದರೆ ಸಂಬಂಧಿಸಿದ ಮುಖ್ಯ ಶಿಕ್ಷಕರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು, ಈ ರೀತಿಯ ವಿಳಂಬಕ್ಕೆ ಮಂಡಳಿ ಜವಾಬ್ದಾರಿಯಾಗುವುದಿಲ್ಲ ಎಂಬ ಅಂಶವನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತಾ, ಗೊಂದಲಗಳಿಗೆ ಅವಕಾಶ ನೀಡದಂತೆ ಮಾಹಿತಿ ತುಂಬಲು ಮುಖ್ಯ ಶಿಕ್ಷಕರಿಗೆ ಮತ್ತೊಮ್ಮೆ ತಿಳಿಸಿದೆ.

[ವಿ.ಸುಮಂಗಲ]
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಮಾನ್ಯತೆ ಪಡೆದಿರುವ ಅನುದಾನ ರಹಿತ ಪ್ರೌಢಶಾಲಾ ಮುಖ್ಯಸ್ಥರಿಗೆ,